# ಶಿರಸಿ ಪ್ರದೇಶದ ಅಪರೂಪದ ಲಜ್ಜಾಗೌರಿ ಶಿಲ್ಪ

**ಸುಜಾತ ಸಿ. ಸಿರಿಯಣ್ಣವರ**

ಸಹಾಯಕ ಪ್ರಾಧ್ಯಾಪಕರು, ಶ್ರೀಮತಿ ಆಯ್. ಎಸ್. ಯಾದವಾಡ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಮದುರ್ಗ, ಬೆಳಗಾವಿ.

DOI: https://doi.org/10.5281/zenodo.18008667

## ABSTRACT:

ಶಿರಸಿ ಪ್ರದೇಶದಲ್ಲಿ ಪತ್ತೆಯಾಗಿರುವ ಅಪರೂಪದ ಲಜ್ಜಾಗೌರಿ ಶಿಲ್ಪವು ಕರ್ನಾಟಕದ ಪ್ರಾಚೀನ ಧಾರ್ಮಿಕ ಹಾಗೂ ಕಲಾತ್ಮಕ ಪರಂಪರೆಯನ್ನು ಪ್ರತಿಬಿಂಬಿಸುವ ಮಹತ್ವದ ಸಾಂಸ್ಕೃತಿಕ ಸಾಕ್ಷಿಯಾಗಿದೆ. ಲಜ್ಜಾಗೌರಿ ದೇವಿಯನ್ನು ಫಲವತ್ತತೆ, ಸೃಷ್ಟಿ ಮತ್ತು ಮಾತೃಶಕ್ತಿಯ ಸಂಕೇತವಾಗಿ ಪೂಜಿಸಲಾಗುತ್ತಿದ್ದು, ಈ ಶಿಲ್ಪವು ಪ್ರಾಚೀನ ಭಾರತದಲ್ಲಿ ಮಾತೃದೇವತಾ ಆರಾಧನೆಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಈ ಶಿಲ್ಪದಲ್ಲಿ ಮಾನವಾಕಾರದ ಬದಲಿಗೆ ಪೂರ್ಣವಾಗಿ ವಿಕಸಿತ ಯೋನಿರೂಪ, ವಿಸ್ತಾರಗೊಂಡ ಪಾದಗಳು ಮತ್ತು ತಲೆಯ ಸ್ಥಾನದಲ್ಲಿ ಕಮಲ ಅಥವಾ ಅಲಂಕೃತ ರೂಪಗಳನ್ನು ಕಾಣಬಹುದು. ಇದು ಶಿಲ್ಪಕಲೆಯಲ್ಲಿನ ವೈಶಿಷ್ಟ್ಯತೆ ಮತ್ತು ತಾತ್ವಿಕ ಅರ್ಥವನ್ನು ತೋರಿಸುತ್ತದೆ. ಶಿರಸಿ ಪ್ರದೇಶದ ಈ ಶಿಲ್ಪವು ಸಾಮಾನ್ಯ ಲಜ್ಜಾಗೌರಿ ಶಿಲ್ಪಗಳಿಗಿಂತ ಶೈಲಿಯಲ್ಲಿಯೂ ವಿನ್ಯಾಸದಲ್ಲಿಯೂ ವಿಭಿನ್ನವಾಗಿದೆ. ಶಿಲ್ಪದ ಶೈಲಿಯ ಅಧ್ಯಯನದಿಂದ ಇದನ್ನು ಪ್ರಾರಂಭಿಕ ಮಧ್ಯಯುಗಕ್ಕೆ ಸೇರಿದ್ದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ಸ್ಥಳೀಯ ಶಿಲ್ಪ ಪರಂಪರೆ, ಧಾರ್ಮಿಕ ನಂಬಿಕೆಗಳು ಮತ್ತು ಗ್ರಾಮೀಣ ಆರಾಧನಾ ಪದ್ಧತಿಗಳ ಸಂಗಮವನ್ನು ಇದು ಪ್ರತಿಬಿಂಬಿಸುತ್ತದೆ. ಈ ಶಿಲ್ಪವು ಶೈವ, ಶಾಕ್ತ ಹಾಗೂ ಜನಪದ ನಂಬಿಕೆಗಳ ಪರಸ್ಪರ ಸಂಬಂಧವನ್ನು ತಿಳಿಯಲು ಸಹಕಾರಿಯಾಗಿದೆ.

## KEYWORDS:

ಲಜ್ಜಾಗೌರಿ, ಶಾಕ್ತ ಪರಂಪರೆ, ಮಾತೃ ದೇವತಾ ಆರಾಧನೆ, ಫಲವತ್ತತೆ, ಯೋನಿರೂಪ ಶಿಲ್ಪ.

**ಪೀಠಿಕೆ:**

ಶಕ್ತ್ಯುಪಾಸನೆಯ ಇತಿಹಾಸ ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ಮಾನವನು ಪ್ರಥಮವಾಗಿ ದೇವತ್ವವನ್ನು ಕಲ್ಪಿಸಿಕೊಂಡನು ಮತ್ತು ಉಪಾಸಿಸಿದನು. ಅದು ಸ್ತ್ರೀ ರೂಪಿಯಾದ ಸೃಷ್ಟಿಯ ಗಹನ ಗೂಢ ಶಕ್ತಿಯನ್ನು ಧಾರಣೆ ಮಾಡಿಕೊಂಡಿರುವ ದೇವೀ ರೂಪದಲ್ಲಿಯೇ ಮಾತೃ ದೇವತೆಯು ಮಾನವನ ಸಂಸ್ಕೃತಿಯ ಇತಿಹಾಸದಲ್ಲಿನ ಆದ್ಯಶಕ್ತಿಯಾಗಿದ್ದಾಳೆ. ಎಂತಲೇ ಮಾನವನು ಅವಳಿಗೆ ಅತ್ಯುನ್ನತ ಸ್ಥಾನವನ್ನು ಕಲ್ಪಿಸಿದನು, ನಾನಾ ರೂಪಗಳಲ್ಲಿ ಕಂಡನು, ನಾನಾ ಹೆಸರುಗಳಲ್ಲಿ ಕರೆದನು ಹಾಗೂ ನಾನಾ ಬಗೆಯಲ್ಲಿ ಪೂಜಿಸಿದನು. ಶಕ್ತ್ಯುಪಾಸನೆಯ ಇತಿಹಾಸವನ್ನು ಸರ್ವ ಅಂಗೋಪಾಂಗಗಳಿಂದ ಶೋಧಿಸ ಹೊರಟ ಅಧ್ಯಯನಕಾರನು ಮೊದಲು ಮನುಷ್ಯನ ಜೀವನ ಪ್ರವಾಹದಲ್ಲಿ ಉಂಟಾಗಿರುವ ಈ ಅನೇಕ ಪಲ್ಲಟಗಳನ್ನು, ಪರಿಣಾಮಗಳನ್ನು ಗಮನಿಸಬೇಕಾಗಿ ಬರುತ್ತದೆ. ಮನುಷ್ಯನ ಮನಸ್ಸು ಅನೇಕ ಗೂಢತಮ ರಹಸ್ಯಗಳನ್ನು ಭೇದಿಸಿರುವ ಸಂಗತಿಯೂ ಗಮನಕ್ಕೆ ಬರುವುದು ಆಗ ಮಾತ್ರ.[1]

**ಉದ್ದೇಶಗಳು:**

1. ಶಕ್ತ್ಯುಪಾಸನೆಯ ಮಹತ್ವವನ್ನು ತಿಳಿದುಕೊಳ್ಳುವುದು.

2. ಶಕ್ತ್ಯುಪಾಸನೆಯ ವಿವಿಧ ರೂಪಗಳ ಬಗ್ಗೆ ತಿಳಿದುಕೊಳ್ಳುವುದು.
3. ಲಜ್ಜಾಗೌರಿ ಮೂರ್ತಿಯ ವಿಶೇಷತೆ ಬಗ್ಗೆ ತಿಳಿದುಕೊಳ್ಳುವುದು.

**ಅಧ್ಯಯನದ ವಿಧಾನ:**

1. ಅನುಷಂಗಿಕ ಆಕರಗಳ ಬಳಕೆ.
2. ಕ್ಷೇತ್ರಕಾರ್ಯ.

**ಹಿನ್ನೆಲೆ:**

"ಭಾರತೀಯ ಪರಂಪರೆ ಆರಂಭದಿಂದಲೂ ಸ್ತ್ರೀಯನ್ನು ಆರಾಧಿಸುತ್ತಾ ಬಂದಿದೆ. ತಾಯಿಯಾದವಳು ಎಂದಿಗೂ ತಂದೆಗಿಂತ ಕೀಳಾದವಳಾಗಿರಲಿಲ್ಲ. ಆದರೆ ತಂದೆ ಎಷ್ಟೋ ವೇಳೆ ಅವಳಿಗಿಂತ ಕಡಿಮೆ ದರ್ಜೆಯವನಾಗಿ ಬಾಳಿದ್ದಿದೆ. ಮಕ್ಕಳನ್ನು ಹೆರುವ ಮತ್ತು ಸಾಕುವ ಅವಳ ಶಕ್ತಿಗಾಗಿಯೇ ಅವಳನ್ನು ಉತ್ತುಂಗ ಸ್ಥಾನದಲ್ಲಿಟ್ಟು ಗೌರವಿಸುತ್ತಾ ಬರಲಾಗಿದೆ. ಆದ್ದರಿಂದಲೇ ಶಾಕ್ತಪಂಥ ಒಂದು ಪ್ರಮುಖ ಪಂಥವಾಗಿ ಈ ದೇಶದಲ್ಲಿ ಬೆಳೆದು ಬಂತು ಮತ್ತು ತನ್ನದೇ ಆದ ಸ್ಥಾನಮಾನದಲ್ಲಿ ಮುಂದುವರೆಯುತ್ತಿದೆ."[2] ಭಾರತದಲ್ಲಿ ಶಕ್ತ್ಯುಪಾಸನೆಯ ಸಾಂಸ್ಕೃತಿಕ ಇತಿಹಾಸವು ಬಹುತೇಕ ಸರ್ವವ್ಯಾಪಕವಾದುದು. ಇದು ಕೇವಲ ಶಾಕ್ತ ತಾಂತ್ರಿಕರ ಪಂಥದ ಮಟ್ಟಿಗಷ್ಟೇ ಅಲ್ಲ, ಎಲ್ಲ ಭಾರತೀಯರ ನಿತ್ಯದ ಧಾರ್ಮಿಕ ಬದುಕಿನಲ್ಲಿಯೂ ಶಕ್ತ್ಯುಪಾಸನೆಯ ಮಹತ್ವವು ನಿನ್ನೆ ಮೊನ್ನೆಯವರೆಗೂ ವ್ಯಾಪಿಸಿದ್ದುದು ಕಂಡು ಬರುತ್ತದೆ. ನಮ್ಮ ವಾಙ್ಮಯ ಧಾರೆಯಲ್ಲಿ ಋಗ್ವೇದದ ಅದಿತಿಯಿಂದ ಹಿಡಿದು, ಇಂದಿಗೂ ಬಾಗಿಲಿಗೆ ಬರುವ ಗೊಂದಲಿಗರ ಹಾಡುಗಳಲ್ಲಿಯ ಭವಾನಿ-ರೇಣುಕೇಯರವರೆಗೆ ಶಕ್ತಿಯ ಮಹಿಮೆಯನ್ನು ಕೇಳಬಹುದಾಗಿದೆ. ಅಂತೆಯೇ ಸಿಂಧೂ ನದಿಯ ತೀರದಲ್ಲಿ ದೊರೆತ ಮೂರು ಸಾವಿರ ವರ್ಷಗಳ ಹಿಂದಿನ ಮೂರ್ತಿಯಿಂದ ಹಿಡಿದು ಹಳ್ಳಿಗಳಲ್ಲಿ ಇಂದಿಗೂ ಪ್ರಭಾವಶಾಲಿಯಾಗಿರುವ ಗ್ರಾಮ ದೇವತೆಗಳವರೆಗೆ ಅವಳ ಉಪಾಸನೆಯ ಸಾತತ್ಯವು ಕಾಣಸಿಗುತ್ತದೆ.[3]

**ಮೂರ್ತಿಯ ಸ್ವರೂಪ:**

ಶಕ್ತ್ಯುಪಾಸನೆಯ ವಾಙ್ಮಯ ರೂಪಗಳ ದರ್ಶನವು ಎಷ್ಟು ಗಹನವಾಗಿರುವುದೋ, ಅಷ್ಟೇ ಮಟ್ಟಿಗೆ ಅವಳ ಮೂರ್ತಿಯ ರೂಪಗಳ ದರ್ಶನವೂ ಆಶ್ಚರ್ಯಕರವಾಗಿಯೇ ವಿಮೂಢಗೊಳಿಸುತ್ತದೆ. ಒಂದು (ಇಳಿಬಿದ್ದ) ಕರಂಡಕದ ಸುಂದರ ರೂಪದಲ್ಲಿ ಆಕೆ ತನ್ನ ಪ್ರಾಥಮಿಕ ಮೂರ್ತಿ ಸ್ವರೂಪವನ್ನು ಪ್ರಕಟಿಸಿರುವುದುಂಟು. ಅಂತೆಯೇ ನಂತರದಲ್ಲಿ ಆಕೆ ಅನೇಕ ಭುಜಗಳಿಂದಲೂ ಹಾಗೂ ಅನೇಕ ಆಯುಧಗಳಿಂದಲೂ ಕೂಡಿದ ರೂಪದಿಂದ ತನ್ನ ಪರಿಣತವಾದ ಮೂರ್ತಿ ಸ್ವರೂಪವನ್ನು ತೋರಿಸಿದ್ದಾಳೆ. ಈ ಎಲ್ಲಾ ಮೂರ್ತಿ ಸ್ವರೂಪಗಳ ಹಿಂದೆ ಉಪಾಸಕರು ಅವಳ ಬಗ್ಗೆ ಹೊಂದಿದ್ದ ಧೋರಣೆಯ ಎಳೆಗಳು ಗೂಢವಾಗಿ ಸುತ್ತಿಕೊಂಡಿವೆ. ಈ ಎಳೆಗಳನ್ನು ಬಿಡಿಸದ ಹೊರತು ಇಂಥ ಮೂರ್ತಿಗಳನ್ನು ಕುರಿತು ಏನನ್ನು ತಿಳಿಸುವುದಕ್ಕೆ ಸಾಧ್ಯವಿಲ್ಲ. ಬನವಾಸಿಯ ಲಜ್ಜಾಗೌರಿಯ ಶಿಲ್ಪ ಈ ಮೂರ್ತಿಗಳಲ್ಲಿನ ಮುಖ್ಯ ವಿಶೇಷತೆಯೆಂದರೆ, ಯೋನಿ ದರ್ಶನಕ್ಕಾಗಿ ಮೊಳಕಾಲುಗಳನ್ನು ಮಡಿಸಿ ಆಕಡೆ ಈಕಡೆ (ಅಂದರೆ ಎರಡೂ ಪಕ್ಕಕ್ಕೆ) ಬಾಗಿಸಿರುವುದು. ಕೆಲವು ಮೂರ್ತಿಗಳು ನಾಭಿಯಿಂದ ಕೆಳಭಾಗದವಷ್ಟೇ ಇದ್ದರೆ, ಮತ್ತೆ ಕೆಲವು ಕುತ್ತಿಗೆಯವರೆಗಷ್ಟೇ ಇರುವುವಾಗಿವೆ. ಯಾವುದಕ್ಕೂ ತಲೆಯನ್ನು ಮಾತ್ರ ಮಾಡಿರುವಂತೆ ಕಾಣುವುದಿಲ್ಲ. ಕುತ್ತಿಗೆಯವರೆಗೆ ರೂಪಿಸಲಾಗಿರುವ ಮೂರ್ತಿಗಳಲ್ಲಿ ಸ್ತನಗಳ ದರ್ಶನಕ್ಕಾಗಿ ಕೈಗಳನ್ನು ಪಕ್ಕಕ್ಕೆ ಇರುವಂತೆ ಮಾಡಲಾಗಿದೆ. ಇನ್ನು

ಕೆಲವು ಮೂರ್ತಿಗಳಲ್ಲಿ ತಲೆಯ ಭಾಗ ಕಮಲದ ಹೂವನ್ನು ಇಡಲಾಗಿದೆ. ಕೈಗಳಲ್ಲಿ ಕಮಲದ ಹೂ ಇಲ್ಲವೆ ಕಮಲದ ಮೊಗ್ಗುಗಳಿವೆ.[4]

**ಉಪಾಸನೆಯ ಪ್ರಯೋಜನ:**

ಈ ದೇವಿಯನ್ನು ಸ್ತ್ರೀಯರು ಸಂತಾನ ಪ್ರಾಪ್ತಿಯ ಉದ್ದೇಶದಿಂದ ಉಪಾಸಿಸುತ್ತಾರೆ. ಬಂಜೆಯಾಗಿರುವ ಸ್ತ್ರೀಯರು ಸಂತಾನ ಪ್ರಾಪ್ತಿಗಾಗಿ ವ್ರತಾಚರಣೆಯನ್ನು ಕೈಗೊಳ್ಳುತ್ತಾರೆ. ಅಂತೆಯೇ ಸಿದ್ಧನಕೋಟೆಯಲ್ಲಿ ಸ್ತ್ರೀಯರು ದೇವಿಯ ಯೋನಿ ಮತ್ತು ಸ್ತನಗಳಿಗೆ ಬೆಣ್ಣೆ ಮತ್ತು ಸಿಂಧೂರವನ್ನು ಹಚ್ಚಿ ತಮ್ಮ ಇಚ್ಛೆಯನ್ನು ನೇರವೇರಿಸುವಂತೆ ಪ್ರಾರ್ಥಿಸುತ್ತಾರೆ. ಆಲಂಪುರದಲ್ಲಿನ ನವಲಿಂಗೇಶ್ವರ ಮಂದಿರದ ಪ್ರಾಕಾರದಲ್ಲಿರುವ ಒಂದು ಚಿಕ್ಕ ದೇವಾಲಯದಲ್ಲಿ ಇಂಥ ದೇವಿಯು ಇದ್ದು ಅವಳನ್ನು ಪೂಜಿಸುತ್ತಿರುವವರೆಲ್ಲ ಸಂತಾನ ಬಯಸುತ್ತಿರುವಂಥ ಸ್ತ್ರೀಯರೇ.

ನಾಗಾರ್ಜುನ ಕೊಂಡದಲ್ಲಿ ದೊರೆತಿರುವ ಚಂದ್ರಶಿಲೆಯ ದೇವಿಯ ಮೂರ್ತಿಯನ್ನು ಇಕ್ಷ್ವಾಕು ವಂಶದ ಏಹುವಲ ಶಾಂತಮೂಲ ಎಂಬಾತನ ಪತ್ನಿಯು ಕೆತ್ತಿಸಿದ ಬಗ್ಗೆ ಲಿಖಿತವಿದೆ. 'ಜೀವತ್ಪುತ್ರಾ ಮತ್ತು ಅವಿಧವಾ' ಸ್ತ್ರೀಯರು ಇದನ್ನು ಮಾಡಿಸಿದ್ದು ಎಂಬುದಾಗಿ ಪಾದ ಪೀಠದ ಮೇಲೆ ಬ್ರಾಹ್ಮೀ ಲಿಪಿಯಿಂದ ಪ್ರಾಕೃತ ಭಾಷೆಯಲ್ಲಿ ಹೇಳಲಾಗಿದೆ. ಮೂರ್ತಿಯನ್ನು ಮಾಡಿಸಿದ ಸ್ತ್ರೀಯನ್ನು 'ಜೀವತ್ಪುತ್ರಾ' ಮತ್ತು 'ಅವಿಧವಾ' ಎಂದು ವಿಶೇಷಣಾತ್ಮಕವಾಗಿ ಹೇಳಿರುವುದರ ಅರ್ಥ ಇದು 'ಸಂತತಿ' ಮತ್ತು 'ಸೌಭಾಗ್ಯದ' ಸಂರಕ್ಷಣೆಗೆ ಸಂಬಂಧಿಸಿದ್ದು ಎಂಬುದನ್ನು ಸ್ಪಷ್ಟವಾಗಿ ಸೂಚಿಸಿರುವುದಾಗಿದೆ.[5] ಹೀಗೆ ಶಿರಸಿ ಪ್ರದೇಶದ ಬನವಾಸಿಯಲ್ಲಿ ದೊರೆತ ಈ ಲಜ್ಜಾಗೌರಿ ಶಿಲ್ಪ ಮಹಿಳೆಯರ ಮುಖ್ಯ ಆರಾಧನಾ ದೇವಿಯಾಗಿದ್ದಳೆಂಬುದು ಗಮನಾರ್ಹವಾದ ವಿಷಯ.

**ಉಪಸಂಹಾರ:**

ದೇವತೆಗಳ ವಿಚಾರವು ಘಟಿಸಿರುವುದು ಜನಪದ ಪರಿಸರವನ್ನು ಆಧರಿಸಿಯೇ. ಯಾವುದಾದರೊಂದು ದೇವತೆಯ ಜನಪ್ರಿಯತೆ ಹೆಚ್ಚಾದರೆ ಸಾಕು, ಧರ್ಮಧುರೀಣರು ಆಕೆಯನ್ನು ಪೂರ್ವ ಪ್ರತಿಷ್ಠಿತ ದೇವತೆಯೊಡನೆ ಸಂಬಂಧ ಕಲ್ಪಿಸುವ ಮುಖೇನ ಬಹಳ ಎತ್ತರೆತ್ತರಕ್ಕೆ ಕೊಂಡೊಯ್ಯುತ್ತಾರೆ; ಮಾತ್ರವಲ್ಲ ಅವಳಿಗೊಂದು ಹೊಸ ಚರಿತ್ರೆಯೂ ರೂಪುಗೊಳ್ಳುತ್ತದೆ. ಆ ಚರಿತ್ರೆಗೆ ಅನುರೂಪವಾಗುವಂತಹ ಪೂರ್ವಸ್ಥಿತಿಯೊಂದನ್ನು ಸಹ ಹೆಸರಿಸುತ್ತಾರೆ. ಈ ಎಲ್ಲದರಲ್ಲಿಯೂ ಮೂಲನಾಮ, ರೂಪ ಮತ್ತು ಬನವಾಸಿಯ ಕುಳಿತ ಸ್ತ್ರೀ ದೇವಿಯ ಚಿತ್ರದ ಧೋರಣೆಗಳ ಸಾಮಗ್ರಿಗಳನ್ನು ಅತ್ಯಂತ ಸೂಕ್ಷ್ಮವಾಗಿಯೂ, ಅತ್ಯಂತ ಕೌಶಲ್ಯದಿಂದಲೂ ಬಳಸಿಕೊಳ್ಳುವುದು ಗಮನೀಯ.

**ಕೊನೆ ಟಿಪ್ಪಣಿಗಳು:**

1. ರಾಮಚಂದ್ರ ಚಿಂತಾಮಣಿ ಡೇರೆ, (ಕನ್ನಡಕ್ಕೆ) ಡಾ. ವಿಠಲರಾವ್ ಗಾಯಕವಾಡ: ಲಜ್ಜಾಗೌರಿ, (ಮರಾಠಿ ಮೂಲ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ. ೧
2. ಹಿ. ಚಿ. ಬೋರಲಿಂಗಯ್ಯ: ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ. ೯೩
3. ಅದೇ ಪು.ಸಂ. ೫
4. ಕ್ಷೇತ್ರ ಕಾರ್ಯ
5. ರಾಮಚಂದ್ರ ಚಿಂತಾಮಣಿ ಡೇರೆ, (ಕನ್ನಡಕ್ಕೆ) ಡಾ. ವಿಠಲರಾವ್ ಗಾಯಕವಾಡ: ಲಜ್ಜಾಗೌರಿ, (ಮರಾಠಿ ಮೂಲ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.ಸಂ. ೫–೬

**ಪರಾಮರ್ಶನ ಗ್ರಂಥಗಳು:**

1. ರಾಮಚಂದ್ರ ಚಿಂತಾಮಣಿ ಡೇರೆ, (ಕನ್ನಡಕ್ಕೆ) ಡಾ. ವಿಠಲರಾವ್ ಗಾಯಕವಾಡ: ಲಜ್ಜಾಗೌರಿ, (ಮರಾಠಿ ಮೂಲ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಹಿ. ಚಿ. ಬೋರಲಿಂಗಯ್ಯ: ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಎಲ್. ಎನ್. ನಾಗರಾಜ್ – ಕರ್ನಾಟಕದ ಶಿಲ್ಪಕಲೆ
4. ಕೆ. ವಿ. ರಾಮನ್ – ಭಾರತೀಯ ಶಾಕ್ತ ಪರಂಪರೆ
5. ಎಸ್. ಸೆಟ್ಟರ್ – ಕರ್ನಾಟಕದ ಪುರಾತತ್ವ ಅಧ್ಯಯನಗಳು
6. ಡಿ. ಸಿ. ಸಿರ್ಕಾರ್ – ಭಾರತೀಯ ಧರ್ಮ ಮತ್ತು ಸಂಸ್ಕೃತಿ
7. ಎಚ್. ಕೃಷ್ಣಮೂರ್ತಿ – ದಕ್ಷಿಣ ಭಾರತದ ಪ್ರಾಚೀನ ದೇವತಾ ಆರಾಧನೆ
8. ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ – ಶೋಧನಾ ವರದಿಗಳು

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.